# ಪ್ರಧಾನಮಂತ್ರಿಗಳ ಭೂತಾನ್ ಭೇಟಿ (ಮಾರ್ಚ್ 21-22, 2024)

ಮಾರ್ಚ್ 19, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು 21-22 ಮಾರ್ಚ್ 2024ರಂದು ಭೂತಾನ್‌ಗೆ ಭೇಟಿ ನೀಡಲಿದ್ದಾರೆ. ಈ ಭೇಟಿಯು ಭಾರತ ಮತ್ತು ಭೂತಾನ್ ನಡುವಿನ ನಿಯಮಿತ ಉನ್ನತ ಮಟ್ಟದ ವಿನಿಮಯದ ಸಾಂಪ್ರದಾಯವನ್ನು ಮುಂದುವರಿಸಲಿದೆ ಮತ್ತು ತನ್ನ ನೆರೆಹೊರೆಯವರೇ ಮೊದಲು ನೀತಿ ಕುರಿತ ಸರ್ಕಾರದ ಪ್ರಾಧಾನ್ಯತೆಯ ಭಾಗವಾಗಿದೆ.

ಈ ಭೇಟಿಯ ವೇಳೆ ಪ್ರಧಾನ ಮಂತ್ರಿಗಳು, ಭೂತಾನ್ ದೊರೆ ಘನತೆವೆತ್ತ ಜಿಗ್ಮೆ ಖೇಸರ್ ನಮ್‌ಗ್ಯೆಲ್ ವಾಂಗ್‌ಚಕ್ ಮತ್ತು ಭೂತಾನ್‌ನ ನಾಲ್ಕನೇ ದೊರೆ ಘನತೆವೆತ್ತ ಜಿಗ್ಮೆ ಸಿಂಗ್ಯೆ ವಾಂಗ್‌ಚಕ್ ಅವರನ್ನು ಭೇಟಿ ಮಾಡಲಿದ್ದಾರೆ. ಅಲ್ಲದೇ ಪ್ರಧಾನಮಂತ್ರಿಯವರು ಭೂತನ್‌ನ ಪ್ರಧಾನಮಂತ್ರಿ ಗೌರವಾನ್ವಿತ ಶ್ರೀ ಶೆರಿಂಗ್ ತಾಬ್ಗೆ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಭಾರತ ಮತ್ತು ಭೂತಾನ್ ಪರಸ್ಪರ ವಿಶ್ವಾಸ, ತಿಳುವಳಿಕೆ ಮತ್ತು ಸದಾಶಯದಲ್ಲಿ ಬೇರೂರಿರುವ ಅನನ್ಯ ಮತ್ತು ನಿರಂತರ ಪಾಲುದಾರಿಕೆಯನ್ನು ಹಂಚಿಕೊಳ್ಳುತ್ತವೆ. ನಮ್ಮ ಹಂಚಿಕೊಂಡ ಆಧ್ಯಾತ್ಮಿಕ ಪರಂಪರೆ ಮತ್ತು ಜನರ ನಡುವಿನ ಉತ್ತಮ ಬಾಂಧವ್ಯ ನಮ್ಮ ಅತ್ಯುತ್ತಮ ಸಂಬಂಧಗಳ ಆಳ ಮತ್ತು ಚೈತನ್ಯವನ್ನು ಹೆಚ್ಚಿಸುತ್ತವೆ. ಈ ಭೇಟಿಯು ದ್ವಿಪಕ್ಷೀಯವಾಗಿ ಮತ್ತು ಪ್ರಾದೇಶಿಕ ಹಿತಾಸಕ್ತಿಯ ವಿಷಯಗಳಲ್ಲಿ ತಮ್ಮ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ಮತ್ತು ನಮ್ಮ ಜನರ ಅನುಕೂಲಕ್ಕಾಗಿ ನಮ್ಮ ಮಾದರಿ ಪಾಲುದಾರಿಕೆಯನ್ನು ವಿಸ್ತರಿಸುವ ಮತ್ತು ತೀವ್ರಗೊಳಿಸುವ ಮಾರ್ಗಗಳ ಕುರಿತು ಉಭಯ ದೇಶಗಳು ಅವಕಾಶಗಳನ್ನು ಒದಗಿಸುತ್ತದೆ.

**ನವದೆಹಲಿ**

**ಮಾರ್ಚ್ 19, 2024**